ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 09ನೇ ಮಾರ್ಚ್, 2020

2018-19 ನೇ ಸಾಲಿನಲ್ಲಿ 466 ವೈದ್ಯಕೀಯ ಸೀಟುಗಳು ಉಳಿದಿರುವ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

470 (417) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2018-19 ನೇ ಸಾಲಿನಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಉಳಿದ 466 ವೈದ್ಯಕೀಯ ಸೀಟುಗಳನ್ನು ಯಾವ ಯಾವ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗೆ ಹಿಂತಿರುಗಿಸಲಾಗಿದೆ ; (ಕಾಲೇಜುವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಉಳಿದ 466 ವೈದ್ಯಕೀಯ ಸೀಟುಗಳನ್ನು ಯಾವ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳಲಾಗಿದೆ ; ಈ ವಿದ್ಯಾರ್ಥಿಗಳಲ್ಲಿ ರಾಜ್ಯದ ವಿದ್ಯಾರ್ಥಿಗಳೆಷ್ಟು ; ಅನ್ಯ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಅವರು ಗಳಿಸಿದ ನೀಟ್ ರ್ಯಾಂಕ್ ಮತ್ತು ಅಂಕಗಳೊಂದಿಗೆ ಯಾವ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಸೀಟು ಪಡೆದಿರುತ್ತಾರೆಂಬ ಬಗ್ಗೆ ಮಾಹಿತಿ ನೀಡುವುದು ;

(ಇ) 2018-19 ನೇ ಸಾಲಿನಲ್ಲಿ ವೈದ್ಯಕೀಯ ಪ್ರವೇಶಕ್ಕಾಗಿ ಸಂದರ್ಶನಕ್ಕೆ ಹಾಜರಾಗಿರುವ ಯಾವ ರ್ಯಾಂಕಿನ ವಿದ್ಯಾರ್ಥಿಯವರೆಗೆ ಪ್ರವೇಶ ದೊರಕಿದೆ ; SC/ST, OBC, GNL ಅಭ್ಯರ್ಥಿಗಳಲ್ಲಿ ಯಾವ ರ್ಯಾಂಕಿನ ಅಭ್ಯರ್ಥಿಯವರೆಗೆ ಪ್ರವೇಶಾವಕಾಶ ದೊರಕಿದೆ ?